ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ 27ನೇ ಫೆಬ್ರವರಿ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು

ಪೀಠವನ್ನು ಅಲಂಕರಿಸಿದ್ದರು.

1) ದೂರದರ್ಶನದವರು ಸದನದ ಸಮೀಕ್ಷೆ ಕಾರ್ಯಕ್ರಮದಲ್ಲಿ ಇಲ್ಲಿನ ಘಟನೆಯನ್ನು ವರದಿ ಮಾಡಿರುವುದು.

+ ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೆ, ನಿನ್ನೆ ನಡೆದಿರುವ ಘಟನೆಯ ಬಗ್ಗೆ ಪುನಃ ಪ್ರಸ್ತಾಪ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಟಿ.ವಿ. ಮಾಧ್ಯಮದವರು ಸದನದ ಸಮೀಕ್ಷೆ ಕಾರ್ಯಕ್ರಮದಲ್ಲಿ ಇಲ್ಲಿನ ಘಟನೆಯನ್ನು ವರದಿ ಮಾಡಿದ್ದಾರೆ. ದಕ್ಷಿಣ ಕನ್ನಡ ಭಾಗದ ಪತ್ರಿಕೆಗಳು ಹೆಡ್‌ಲೈನ್‌ನಲ್ಲಿ ಬೇರೆಯದನ್ನೇ ಹಾಕಿಬಿಟ್ಟಿದ್ದಾರೆ. ಯಾರಾದರೂ ಓದಿದರೆ ಏನೋ ಸದಾನಂದಗೌಡರು ಅಪರಾಧ ಮಾಡಿಬಿಟ್ಟಿದ್ದಾರೋ ಎನ್ನುವಂತೆ ಕಂಡುಬರುತ್ತದೆ. ಟಿ.ವಿ. ಮಾಧ್ಯಮದಲ್ಲೂ ಆ ರೀತಿ ಭಾವನೆ ಬರುವಂತೆ ತೋರಿಸಿದ್ದಾರೆಂತೆ, ನಾನು ಅದನ್ನು ನೋಡಲಿಲ್ಲ. ನಾವು ಸದನದಲ್ಲಿ ಕೆಲವೊಂದು ಶಿಷ್ಟಾಚಾರವನ್ನು, ಸತ್‌ಸಂಪ್ರದಾಯವನ್ನು ಹಾಕಿಕೊಂಡಿದ್ದೇವೆ. ನನ್ನ ಅನುಭವದಲ್ಲಿ ನಾವು ಏನೂ ತಪ್ಪು ಮಾಡದಿದ್ದರೂ, ಅಧ್ಯಕ್ಷರ ಮನಸ್ಸಿಗೆ ನೋವಾಗಿದ್ದಾಗ ವಿಷಾದಪಡುತ್ತೇವೆ. ಅಂದರೆ ಆ ಪೀಠಕ್ಕೆ ಗೌರವ ಕೊಡಬೇಕು ಎನ್ನತಕ್ಕ ಶಿಷ್ಟಾಚಾರವನ್ನು ಪಾಲಿಸಿಕೊಂಡು ಬಂದಿದ್ದೇವೆ. ಪುತ್ತೂರಿನಲ್ಲಿ ಕಾಂಗ್ರೆಸ್ ಪಕ್ಷದ ನನ್ನ ಮಿತ್ರರುಗಳು ನೋಡಿ, ನಿಮ್ಮ ಸ್ನೇಹಿತ ಶಾಸಕರು ಮಾಡುವುದು ಇದೇ ಕೆಲಸವೇ ಎಂದು ಹೇಳಿ, ಅದನ್ನೇ ದೊಡ್ಡ ಇಶ್ಯೂ ಮಾಡಿಕೊಂಡು ಪ್ರೊಟೆಸ್ಟ್ ಮಾಡಿದ್ದಾರೆ. ಅವರ ಮತ್ತು ನಮ್ಮ ಪಕ್ಷದ ಕಾರ್ಯಕರ್ತರಿಗೂ ಹೊಡೆದಾಟವಾಗಿದೆ. ಈ ಮಾಧ್ಯಮಗಳಿಂದ ಎಷ್ಟು ಅನಾಹುತವಾಗುತ್ತದೆ ಎಂಬುದಕ್ಕೆ ನಾನು ಹೇಳುತ್ತಿದ್ದೇನೆ. ಇಲ್ಲಿ ಅಪರಾಧ ಮಾಡಿದ್ದಾರೆಂದಲ್ಲ, ಮನಸ್ಸಿಗೆ ನೋವಾಗಿದ್ದರೆ ನಾವು ವಿಷಾಧಪಡಬೇಕಾಗುತ್ತದೆ. ಹಿಂದೆ ನಾವು ಕೆಲವು ಸಾರಿ ನೋಡಿದ್ದೇವೆ, ಅಧ್ಯಕ್ಷರೇ ತಪ್ಪು ಮಾಡಿದ್ದರು ನಾವೇ ವಿಷಾದವನ್ನು ವ್ಯಕ್ತಮಾಡಬೇಕಾಗುತ್ತದೆ. ಏಕೆಂದರೆ ಆ ಪೀಠಕ್ಕೆ ಗೌರವವನ್ನು ಕೊಡಬೇಕು ಎನ್ನತಕ್ಕ ಶಿಷ್ಟಾಚಾರವನ್ನು, ಸಂಪ್ರದಾಯವನ್ನು, ಆ ಸಜ್ಜನಿಕೆಯನ್ನು ನಾವು ಪಾಲನೆ ಮಾಡಿಕೊಂಡು ಬಂದಿದ್ದೇವೆ. ನಿನ್ನೆ ಸದಾನಂದಗೌಡರೂ ಸಹ ನಾನೂ ರಾಜೀನಾಮೆಯನ್ನು ಕೊಟ್ಟು ಊರಿಗೆ ಹೋಗುತ್ತೇನೆ, ನನ್ನನ್ನು ಅಪರಾಧಿ ಎನ್ನುವಂತೆ ಮಾಡಿದ್ದಾರೆ, ಅವರ ಊರಿನಿಂದೆಲ್ಲಾ

ಮಾಡುತ್ತಿರುವಾಗ, ಆ ವಿಷಯ ಎಲ್ಲೆಲ್ಲಿಗೋ ಹೋಯಿತು. ನಾನು ನಿಮಗೆ ಕೈ ಮುಗಿದು ಕೇಳುವುದಿಷ್ಟೇ. ಏನು ನಿನ್ನೆ ಸದನದಲ್ಲಿ ಘಟನೆ ನಡೆದಿದೆ. ಅದು ಹೇಗಿದ್ದರೂ ಕಡತದಲ್ಲಿದೆ, ತಾವು ವೈಯಕ್ತಿಕವಾಗಿ ನಮ್ಮ ಬಗ್ಗೆ ಏನೂ ಇಲ್ಲ ಎನ್ನುವಂತಹ ಅಂಶವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತಕ್ಕ ಸಂದರ್ಭದಲ್ಲಿ ಮಾನ್ಯ ಸದಾನಂದಗೌಡರು ಏನೂ ತಪ್ಪು ಮಾಡಿಲ್ಲವೆಂದು ಅವರೂ ಕೂಡ ಸ್ಪಷ್ಟನೆ ಕೊಟ್ಟರು. ಅವರೂ ಕೂಡ ಪತ್ರಿಕೆಗಳಲ್ಲಿ, ರೇಡಿಯೋದಲ್ಲಿ ಮತ್ತು ಟಿ.ವಿ.ಯಲ್ಲಿ ಬಂದಿರುವಂತಹ ಅಂಶಗಳನ್ನು ಗಮನಿಸಿದ ಮೇಲೆ ಏನೇನೋ ಬಹಳ ಬಾಹ್ಯಾಲಾಪಗಳು ಕೇಳಿ ಬರುತ್ತಿವೆ. ಮಕೆಂದರೆ ಸಭಾಧ್ಯಕ್ಷರ ಸ್ಥಾನಕ್ಕೆ ನಾವಾಗಲೀ ಅಥವಾ ನಮ್ಮ ಪಕ್ಷದವರಾಗಲೀ ಗೌರವ ಕೊಡುವುದರಲ್ಲಿ ನಾವೆಂದೂ ಹಿಂದೆ ಬೀಳುವಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಾನು ಕೇಳುವುದು ಇಷ್ಟೇ, ನಿನ್ನೆ ಇಲ್ಲಿ ಏನು ನಡೆಯಿತು ಎಂಬುದು ಕಡತದಲ್ಲಿದೆ, ಒಂದೊಂದು ಪತ್ರಿಕೆಗಳು ಒಂದೊಂದು ರೀತಿಯ ಅಭಿಪ್ರಾಯಗಳನ್ನು ನೀಡಿರುವಂತಹ ಈ ಸಂದರ್ಭದಲ್ಲಿ ತಾವೇ ಆ ಕಡತದ ಸಂಪೂರ್ಣ ವರದಿ, ಅದು ತುಂಬಾ ಜಾಸ್ತಿ ಏನಿಲ್ಲ, ಏನು ನಡೆಯಿತು? ..... ಮಕೆಂದರೆ ಇತಿಹಾಸದಲ್ಲಿ ನಡೆಯಬಾರದಂತಹ ಘಟನೆ. ಒಂದೊಂದು ಪತ್ರಿಕೆಯಲ್ಲಿ ಒಂದೊಂದು ರೀತಿಯಲ್ಲಿ ಬಂದಿದೆ. ಅದನ್ನು ತಾವೂ ನೋಡಿದ್ದೀರಿ. ಹಾಗಾಗಿ ನಡೆಯಿರುವಂತಹ ಘಟನೆಯು ನಡೆಯಲಿ, ಪ್ರಾರಂಭದಲ್ಲಿ ತಾವು ಪೀಠದಲ್ಲಿ ಬಂದು ಕುಳಿತಂತಹ ಸಂದರ್ಭದಿಂದ ಹಿಡಿದು ತಾವು ಪಾಪಸ್ ಹೋಗಿ, ಮತ್ತೆ ಬಂದು ಈ ಸದನದಲ್ಲಿ ಆಗ ಏನೆಲ್ಲಾ ನಡೆಯಿತು ಎನ್ನುವುದನ್ನು, ಒಂದು ರೀತಿ ಅಡ್ಜರ್ನ್‌ಮೆಂಟ್ ಮುಖಾಂತರವೇ, ತಾವು ತಮ್ಮ ಕಛೇರಿಯಿಂದ ಪತ್ರಿಕೆಯಲ್ಲಿ ಹಾಕಿಸಿದರೆ, ಅದರ ಖರ್ಚೂ ಕೂಡ ಸರ್ಕಾರಕ್ಕೆ, ಜನ ಸಾಮಾನ್ಯರಿಗೆ ಹೊರೆ ಬೀಳಿತವಾಗಿ ಬೀಳುವುದು ಬೇಡ, ಅದಕ್ಕೆ ಹಣವನ್ನೂ ಕೂಡ ನಾವೇ ಯಾರಾದರೂ ಕೊಡುತ್ತೇವೆ, ನಾನು ಖತಕ್ಕೆ ಈ ಅಂಶವನ್ನು ಹೇಳುತ್ತಿದ್ದೇನೆ ಅಂದರೆ, ಇವತ್ತಿನವರೆಗೆ ಈ ಸದನದಲ್ಲಿ ನಾವು ಯಾರೂ ಕೂಡ ಸಭಾಧ್ಯಕ್ಷರ ಜೊತೆಗೆ ಅಗೌರವ ಮಾಡಬೇಕೆಂದಾಗಲೀ ಚಿಕಮಕಿಯಾಗಲೀ, ನಮಗೆ ಅದರ ಒಗ್ಗೆ ಅಪೇಕ್ಷೆಯೂ ಇಲ್ಲ, ಅಸಕ್ತಿಯೂ ಇಲ್ಲ. ಸರ್ಕಾರ ಮಾಡುತ್ತಿರುವಂತಹ ತಪ್ಪನ್ನು ಈ ರಾಜ್ಯದ ಜನತೆಗೆ ತಿಳಿಸಬೇಕು ಮತ್ತು ಸರ್ಕಾರವನ್ನು ಕೂಡ ಸ್ವಲ್ಪ ಹುರುಕುಗೊಳಿಸಬೇಕು ಎನ್ನುವಂತಹ ಒಂದೇ ಉದ್ದೇಶದಿಂದ ನಡೆದಂತಹ ಈ ಘಟನೆಗೆ ವೈಯಕ್ತಿಕವಾಗಿ ಇದನ್ನು ದುರುಪಯೋಗ ಮಾಡಿಕೊಳ್ಳುವಂತಹ ವ್ಯಕ್ತಿಗಳೂ ಇರಬಹುದು, ಪಕ್ಷಗಳೂ ಇರಬಹುದು, ಹೀಗಾಗಿ ನಮ್ಮ ರಕ್ಷಣೆಗೆ ಈ ಸಂದರ್ಭದಲ್ಲಿ ತಾವು ಬರಲೇ ಬೇಕು. ನನ್ನ ಮನಸ್ಸು ಇಷ್ಟೇನೇ, ನಿನ್ನೆ ನಡೆದಂತಹ ಘಟನೆಯ ನಡವಳಿ ಏನು ಇದೆ, ಅದನ್ನು ಅಡ್ಜರ್ನ್‌ಮೆಂಟ್ ಮುಖಾಂತರ ಪತ್ರಿಕೆಗಳಿಗೆ ಕೊಡಿ. ಇಡೀ ರಾಜ್ಯದ ಜನ ಆ ಬಗ್ಗೆ ತಿಳಿದುಕೊಳ್ಳಲಿ. ಇದನ್ನು ನಡೆಸಿಕೊಡಬೇಕೆಂದು ನಾನು ನಿಮಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ. ಇದು ನಮ್ಮ ಪ್ರಾರ್ಥನೆ.

ಅಧ್ಯಕ್ಷರು : ಈಗ ತಾವು ಪ್ರಸ್ತಾಪ ಮಾಡಿದ್ದರಿಂದ ಅನಿವಾರ್ಯವಾಗಿ ನಾನು ಕಡಿಮೆ ಸಮಯ ಒಂದೆರಡು ನಿಮಿಷ ತೆಗೆದುಕೊಳ್ಳಲೇಬೇಕಾಯಿತು. ಅಂದರೆ ತಾವು ಮನಸ್ಸಿನ ಅಂತರಾಳದಲ್ಲಿ ನಿಮಗೆ ಇರತಕ್ಕಂಥ ಒಂದು ಪ್ರಥಮವನ್ನು ನೀವು ತೋರಿಸಿಕೊಂಡಿದ್ದೀರಿ. ಅದಕ್ಕೆ ಹೇಗೆ ಪರಿಹಾರ ಕಂಡು ಹಿಡಿದುಕೊಳ್ಳಬೇಕು, ನಿಮ್ಮ ಗೌರವಕ್ಕೆ ಚ್ಯುತಿ ಬಾರದ ರೀತಿಯಲ್ಲಿ ನಾನು ಹೇಗೆ ಇದನ್ನು ಪ್ರಚುರ ಪಡಿಸಬೇಕು ಎನ್ನುವುದನ್ನು ನನ್ನ ವಿವೇಚನೆಗೆ ಬಿಡಿ. ನಾನು ಖಂಡಿತಾ ಮಾಡುತ್ತೇನೆ. ನಿಮಗೆ ನಾನು

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ 27ನೇ ಫೆಬ್ರವರಿ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (**ಶ್ರೀ ರಮೇಶ್ ಕುಮಾರ್**) ಅವರು

ಪೀಠವನ್ನು ಅಲಂಕರಿಸಿದ್ದರು.

1) ದೂರದರ್ಶನದವರು ಸದನದ ಸಮೀಕ್ಷೆ ಕಾರ್ಯಕ್ರಮದಲ್ಲಿ ಇಲ್ಲಿನ ಘಟನೆಯನ್ನು ವರದಿ ಮಾಡಿರುವುದು.

+ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೆ, ನಿನ್ನೆ ನಡೆದಿರುವ ಘಟನೆಯ ಬಗ್ಗೆ ಪುನಃ ಪ್ರಸ್ತಾಪ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಟಿ.ವಿ. ಮಾಧ್ಯಮದವರು ಸದನದ ಸಮೀಕ್ಷೆ ಕಾರ್ಯಕ್ರಮದಲ್ಲಿ ಇಲ್ಲಿನ ಘಟನೆಯನ್ನು ವರದಿ ಮಾಡಿದ್ದಾರೆ. ದಕ್ಷಿಣ ಕನ್ನಡ ಭಾಗದ ಪತ್ರಿಕೆಗಳು ಹೆಡ್‌ಲೈನ್‌ನಲ್ಲಿ ಬೇರೆಯದನ್ನೇ ಹಾಕಿಬಿಟ್ಟಿದ್ದಾರೆ. ಯಾರಾದರೂ ಓದಿದರೆ ಏನೋ ಸದಾನಂದಗೌಡರು ಅಪರಾಧ ಮಾಡಿಬಿಟ್ಟಿದ್ದಾರೋ ಎನ್ನುವಂತೆ ಕಂಡುಬರುತ್ತದೆ. ಟಿ.ವಿ. ಮಾಧ್ಯಮದಲ್ಲೂ ಆ ರೀತಿ ಭಾವನೆ ಬರುವಂತೆ ತೋರಿಸಿದ್ದಾರಂತೆ, ನಾನು ಅದನ್ನು ನೋಡಲಿಲ್ಲ. ನಾವು ಸದನದಲ್ಲಿ ಕೆಲವೊಂದು ಶಿಷ್ಟಾಚಾರವನ್ನು, ಸತ್‌ಸಂಪ್ರದಾಯವನ್ನು ಹಾಕಿಕೊಂಡಿದ್ದೇವೆ. ನನ್ನ ಅನುಭವದಲ್ಲಿ ನಾವು ಏನೂ ತಪ್ಪು ಮಾಡಿದ್ದರೂ, ಅಧ್ಯಕ್ಷರ ಮನಸ್ಸಿಗೆ ನೋವಾಗಿದ್ದಾಗ ವಿಷಾದಪಡುತ್ತೇವೆ. ಅಂದರೆ ಆ ಪೀಠಕ್ಕೆ ಗೌರವ ಕೊಡಬೇಕು ಎನ್ನುತಕ್ಕ ಶಿಷ್ಟಾಚಾರವನ್ನು ಪಾಲಿಸಿಕೊಂಡು ಬಂದಿದ್ದೇವೆ. ಪುತ್ತೂರಿನಲ್ಲಿ ಕಾಂಗ್ರೆಸ್ ಪಕ್ಷದ ನನ್ನ ಮಿತ್ರರುಗಳು ನೋಡಿ, ನಿಮ್ಮ ಸ್ನೇಹಿತ ಶಾಸಕರು ಮಾಡುವುದು ಇದೇ ಕೆಲಸವೇ ಎಂದು ಹೇಳಿ, ಅದನ್ನೇ ದೊಡ್ಡ ಇಶ್ಯೂ ಮಾಡಿಕೊಂಡು ಪ್ರೊಟೆಸ್ಟ್ ಮಾಡಿದ್ದಾರೆ. ಅವರ ಮತ್ತು ನಮ್ಮ ಪಕ್ಷದ ಕಾರ್ಯಕರ್ತರಿಗೂ ದೊಡ್ಡದಾಟಿವಾಗಿದೆ. ಈ ಮಾಧ್ಯಮಗಳಿಂದ ಎಷ್ಟು ಅನಾಹುತವಾಗುತ್ತದೆ ಎಂಬುದಕ್ಕೆ ನಾನು ಹೇಳುತ್ತಿದ್ದೇನೆ. ಇಲ್ಲಿ ಅಪರಾಧ ಮಾಡಿದ್ದಾರೆಂದಲ್ಲ, ಮನಸ್ಸಿಗೆ ನೋವಾಗಿದ್ದರೆ ನಾವು ವಿಷಾಧಪಡಬೇಕಾಗುತ್ತದೆ. ಹಿಂದೆ ನಾವು ಕೆಲವು ಸಾರಿ ನೋಡಿದ್ದೇವೆ, ಅಧ್ಯಕ್ಷರೇ ತಪ್ಪು ಮಾಡಿದ್ದರು ನಾವೇ ವಿಷಾದವನ್ನು ವ್ಯಕ್ತಮಾಡಬೇಕಾಗುತ್ತದೆ. ಏಕೆಂದರೆ ಆ ಪೀಠಕ್ಕೆ ಗೌರವವನ್ನು ಕೊಡಬೇಕು ಎನ್ನತಕ್ಕ ಶಿಷ್ಟಾಚಾರವನ್ನು, ಸಂಪ್ರದಾಯವನ್ನು, ಆ ಸಜ್ಜನಿಕೆಯನ್ನು ನಾವು ಪಾಲನೆ ಮಾಡಿಕೊಂಡು ಬಂದಿದ್ದೇವೆ. ನಿನ್ನೆ ಸದಾನಂದಗೌಡರೂ ಸಹ ನಾನೂ ರಾಜೀನಾಮೆಯನ್ನು ಕೊಟ್ಟು ಊರಿಗೆ ಹೋಗುತ್ತೇನೆ, ನನ್ನನ್ನು ಅಪರಾಧಿ ಎನ್ನುವಂತೆ ಮಾಡಿದ್ದಾರೆ, ಅವರ ಊರಿನಿಂದೆಲ್ಲಾ

ಮಾಡುತ್ತಿದ್ದಾಗ, ಆ ವಿಷಯ ಎಲ್ಲೆಲ್ಲಿಗೋ ಹೋಯಿತು. ನಾನು ನಿಮಗೆ ಕೈ ಮುಗಿದು ಕೇಳುವುದಿಷ್ಟೇ. ಏನು ನಿನ್ನೆ ಸದನದಲ್ಲಿ ಘಟನೆ ನಡೆದಿದೆ, ಅದು ಹೇಗಿದ್ದರೂ ಕಡತದಲ್ಲಿದೆ, ತಾವು ವೈಯಕ್ತಿಕವಾಗಿ ನಮ್ಮ ಬಗ್ಗೆ ಏನೂ ಇಲ್ಲ ಎನ್ನುವಂತಹ ಅಂಶವನ್ನೂ ತಾವು ಪ್ರಸ್ತಾಪ ಮಾಡಿದ್ದೀರಿ, ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡತಕ್ಕ ಸಂದರ್ಭದಲ್ಲಿ ಮಾನ್ಯ ಸದಾನಂದಗೌಡರು ಏನೂ ತಪ್ಪು ಮಾಡಿಲ್ಲವೆಂದು ಅವರೂ ಕೂಡ ಸ್ಪಷ್ಟನೆ ಕೊಟ್ಟರು. ಆದರೂ ಕೂಡ ಪತ್ರಿಕೆಗಳಲ್ಲಿ, ರೇಡಿಯೋದಲ್ಲಿ ಮತ್ತು ಟಿ.ವಿ.ಯಲ್ಲಿ ಬಂದಿರುವಂತಹ ಅಂಶಗಳನ್ನು ಗಮನಿಸಿದ ಮೇಲೆ ಏನೇನೋ ಬಹಳ ಉಹಾಪೋಹಗಳು ಕೇಳಿ ಬರುತ್ತಿವೆ. ಏಕೆಂದರೆ ಸಭಾಧ್ಯಕ್ಷರ ಸ್ಥಾನಕ್ಕೆ ನಾವಾಗಲೀ ಅಥವಾ ನಮ್ಮ ಪಕ್ಷದವರಾಗಲೀ ಗೌರವ ಕೊಡುವುದರಲ್ಲಿ ನಾವೆಂದೂ ಹಿಂದೆ ಬೀಳುವಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಾನು ಕೇಳುವುದು ಇಷ್ಟೇ, ನಿನ್ನೆ ಇಲ್ಲಿ ಏನು ನಡೆಯಿತು ಎಂಬುದು ಕಡತದಲ್ಲಿದೆ, ಒಂದೊಂದು ಪತ್ರಿಕೆಗಳು ಒಂದೊಂದು ರೀತಿಯ ಅಭಿಪ್ರಾಯಗಳನ್ನು ನೀಡಿರುವಂತಹ ಈ ಸಂದರ್ಭದಲ್ಲಿ ತಾವೇ ಆ ಕಡತದ ಸಂಪೂರ್ಣ ವರದಿ, ಅದು ತುಂಬಾ ಜಾಸ್ತಿ ಏನಿಲ್ಲ, ಏನು ನಡೆಯಿತು? ..... ಏಕೆಂದರೆ ಇತಿಹಾಸದಲ್ಲಿ ನಡೆಯದಿರುವಂತಹ ಘಟನೆ, ಒಂದೊಂದು ಪತ್ರಿಕೆಯಲ್ಲಿ ಒಂದೊಂದು ರೀತಿಯಲ್ಲಿ ಬಂದಿದೆ, ಅದನ್ನು ತಾವೂ ನೋಡಿದ್ದೀರಿ. ಹಾಗಾಗಿ ನಡೆದಿರುವಂತಹ ಘಟನೆಯ ನಡವಳಿ, ಪ್ರಾರಂಭದಲ್ಲಿ ತಾವು ಪೀಠದಲ್ಲಿ ಬಂದು ಕುಳಿತಂತಹ ಸಂದರ್ಭದಿಂದ ಹಿಡಿದು ತಾವು ವಾಪಸ್ ಹೋಗಿ, ಮತ್ತೆ ಬಂದು ಈ ಸದನದಲ್ಲಿ ಆಗ ಏನೆಲ್ಲಾ ನಡೆಯಿತು ಎನ್ನುವುದನ್ನು, ಒಂದು ರೀತಿ ಅಡ್ವರ್ಟೈಸ್‌ಮೆಂಟ್ ಮುಖಾಂತರವೇ, ತಾವು ತಮ್ಮ ಕಛೇರಿಯಿಂದ ಪತ್ರಿಕೆಯಲ್ಲಿ ಹಾಕಿಸಿದರೆ, ಅದರ ಖರ್ಚೂ ಕೂಡ ಸರ್ಕಾರಕ್ಕೆ, ಜನ ಸಾಮಾನ್ಯರಿಗೆ ಹೊರೆ ಖಂಡಿತವಾಗಿ ಬೀಳುವುದು ಬೇಡ, ಅದಕ್ಕೆ ಹಣವನ್ನೂ ಕೂಡ ನಾವೇ ಯಾರಾದರೂ ಕೊಡುತ್ತೇವೆ, ನಾನು ಏತಕ್ಕೆ ಈ ಅಂಶವನ್ನು ಹೇಳುತ್ತಿದ್ದೇನೆ ಅಂದರೆ, ಇವತ್ತಿನವರೆಗೆ ಈ ಸದನದಲ್ಲಿ ನಾವು ಯಾರೂ ಕೂಡ ಸಭಾಧ್ಯಕ್ಷರ ಜೊತೆಗೆ ಅಗೌರವ ಮಾಡಬೇಕೆಂದಾಗಲೀ ಚಕಮಕಿಯಾಗಲೀ, ನಮಗೆ ಅದರ ಬಗ್ಗೆ ಅಪೇಕ್ಷೆಯೂ ಇಲ್ಲ, ಆಸಕ್ತಿಯೂ ಇಲ್ಲ. ಸರ್ಕಾರ ಮಾಡುತ್ತಿರುವಂತಹ ತಪ್ಪನ್ನು ಈ ರಾಜ್ಯದ ಜನತೆಗೆ ತಿಳಿಸಬೇಕು ಮತ್ತು ಸರ್ಕಾರವನ್ನೂ ಕೂಡ ಸ್ವಲ್ಪ ಚುರುಕುಗೊಳಿಸಬೇಕು ಎನ್ನುವಂತಹ ಒಂದೇ ಉದ್ದೇಶದಿಂದ ನಡೆದಂತಹ ಈ ಘಟನೆಗೆ ವೈಯಕ್ತಿಕವಾಗಿ ಇದನ್ನು ದುರುಪಯೋಗ ಮಾಡಿಕೊಳ್ಳುವಂತಹ ವ್ಯಕ್ತಿಗಳೂ ಇರಬಹುದು, ಪಕ್ಷಗಳೂ ಇರಬಹುದು, ಹೀಗಾಗಿ ನಮ್ಮ ರಕ್ಷಣೆಗೆ ಈ ಸಂದರ್ಭದಲ್ಲಿ ತಾವು ಬರಲೇ ಬೇಕು. ನನ್ನ ಮನವಿ ಇಷ್ಟೇನೇ, ನಿನ್ನೆ ನಡೆದಂತಹ ಘಟನೆಯ ನಡವಳಿ ಏನು ಇದೆ, ಅದನ್ನು ಅಡ್ವರ್ಟೈಸ್‌ಮೆಂಟ್ ಮುಖಾಂತರ ಪತ್ರಿಕೆಗಳಿಗೆ ಕೊಡಿ. ಇಡೀ ರಾಜ್ಯದ ಜನ ಆ ಬಗ್ಗೆ ತಿಳಿದುಕೊಳ್ಳಲಿ. ಇದನ್ನು ನಡೆಸಿಕೊಡಬೇಕೆಂದು ನಾನು ನಿಮಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ. ಇದು ನಮ್ಮ ಪ್ರಾರ್ಥನೆ.

ಅಧ್ಯಕ್ಷರು : ಈಗ ತಾವು ಪ್ರಸ್ತಾಪ ಮಾಡಿದ್ದರಿಂದ ಅನಿವಾರ್ಯವಾಗಿ ನಾನು ಸದನದ ಸಮಯ ಒಂದೆರಡು ನಿಮಿಷ ತೆಗೆದುಕೊಳ್ಳಲೇಬೇಕಾಯಿತು. ಅಂದರೆ ತಾವು ಮನಸ್ಸಿನ ಅಂತರಾಳದಲ್ಲಿ ನಿಮಗೆ ಇರತಕ್ಕಂಥ ಒಂದು ವ್ಯಥೆಯನ್ನು ನೀವು ತೋಡಿಕೊಂಡಿದ್ದೀರಿ. ಅದಕ್ಕೆ ಹೇಗೆ ಪರಿಹಾರ ಕಂಡು ಹಿಡಿದುಕೊಳ್ಳಬೇಕು, ನಿಮ್ಮ ಗೌರವಕ್ಕೆ ಚ್ಯುತಿ ಬಾರದ ರೀತಿಯಲ್ಲಿ ನಾನು ಹೇಗೆ ಇದನ್ನು ಪ್ರಚುರ ಪಡಿಸಬೇಕು ಎನ್ನುವುದನ್ನು ನನ್ನ ವಿವೇಚನೆಗೆ ಬಿಡಿ, ನಾನು ಖಂಡಿತಾ ಮಾಡುತ್ತೇನೆ. ನಿಮಗೆ ನಾನು

ತೊಂದರೆ ಮಾಡುವುದಿಲ್ಲ. ಸಭಾಧ್ಯಕ್ಷರು ಕ್ಷಮೆ ಕೋರತಕ್ಕದ್ದು ಬಹಳ ಅಪರೂಪ ಎಂದು ತಾವು ಹೇಳಿದಿರಿ. ಹೌದು, ನಾನು ಸಭಾಧ್ಯಕ್ಷ ಆದಮೇಲೆ ಅನೇಕ ವಿಚಾರಗಳಲ್ಲಿ ನಾನು ಸ್ವಲ್ಪ ಚರ್ಚಾಸ್ಪದ ವ್ಯಕ್ತಿ ಆಗಿದ್ದೇನೆ. ಬಹಿರಂಗ ಸಭೆಗಳಲ್ಲಿ ನಾನು ಮಾತನಾಡತಕ್ಕಂಥ ವಿಚಾರ, ಸಂದರ್ಶನಗಳಲ್ಲಿ ನಾನು ಹೇಳತಕ್ಕಂಥದ್ದು ಇದೆಲ್ಲಾ ಚರ್ಚಾಸ್ಪದವಾಗಿದೆ. ಸಭಾಧ್ಯಕ್ಷ ಆದವನು ನಿರ್ಜೀವ ವ್ಯಕ್ತಿಯಲ್ಲ. ಅವನೂ ಕೂಡ ಒಬ್ಬ ಸಕ್ರೀಯ ರಾಜಕಾರಣಿ. ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಮೇಲೆ ತನ್ನ ಜವಾಬ್ದಾರಿ ನಿರ್ವಹಣೆಗೆ ನಿಷ್ಪಕ್ಷ ಮನೋಭಾವದಿಂದ ಅವನು ಇರಬೇಕು. ನಾನು ಕಳೆದ ಐದು ವರ್ಷಗಳಲ್ಲಿ ಸಕ್ರೀಯವಾದ ಹೋರಾಟ ಮಾಡಿ, ಸದನಕ್ಕೆ ಗೆದ್ದು ಬಂದ ತಕ್ಷಣ ನಾನು ಅಧ್ಯಕ್ಷನಾಗಿದ್ದೇನೆ. ಆದರೂ ಕೂಡ ನಾನು ಬಹಳ ನಿಗ್ರಹದಿಂದ, ತಮಗೆ ಹೇಳಬೇಕಾಗಿದ್ದರೆ ಪಿ.ಎಲ್.ಡಿ. ಬ್ಯಾಂಕ್ ಚುನಾವಣೆ ನಡೆಯಿತು ಅಂದರೂ ಕೂಡ ನಾನು ಊರಿನ ಕಡೆಗೆ ಹೋಗುವುದಿಲ್ಲ. ಪಾರ್ಲಿಮೆಂಟ್ ಚುನಾವಣೆ ಅಥವಾ ಇನ್ನೊಂದು ಚುನಾವಣೆ ವಿಷಯ ಹಾಗಿರಲಿ, ಪಿ.ಎಲ್.ಡಿ. ಬ್ಯಾಂಕ್ ಚುನಾವಣೆ ಇದ್ದರೂ ನಾನು ಹೋಗುವುದಿಲ್ಲ. ಇಷ್ಟೊಂದು ಜವಾಬ್ದಾರಿಯಿಂದ ನಾನು ನಡೆದುಕೊಳ್ಳುತ್ತಿದ್ದೇನೆ. ಸ್ಪೀಕರ್ಸ್ ಆಕ್ಟಿವಿಸಂ ಅಂತ ಹೇಳಿ ಕೆಲವರು ವ್ಯಾಖ್ಯಾನ ಮಾಡಿರತಕ್ಕಂಥದ್ದನ್ನು ಕೂಡ ನಾನು ಕೇಳಿದ್ದೇನೆ. ಅಧ್ಯಕ್ಷರು ಬಹಳ ಮಾತನಾಡುತ್ತಾರೆ ಎಂದೂ ಸಹ ನನ್ನ ಬಗ್ಗೆ ಟೀಕೆ ಬಂದುವನ್ನು ಕೇಳಿದ್ದೇನೆ. ಕೆಲವು ವಿಚಾರಗಳ ಮೇಲೆ ನಾನು ಮಾತನಾಡದೇ ಹೇಗೆ ಕುಳಿತಿರಲಿ? ನಾನು ಸ್ಪೀಕರ್‌ರವರ ಕರ್ತವ್ಯಗಳಿಗೆ, ಸಭಾಧ್ಯಕ್ಷರಾಗಿ ನಡೆಸಬೇಕಾದಂತಹ ಕರ್ತವ್ಯಗಳಿಗೆ ಚ್ಯುತಿ ಬರತಕ್ಕಂಥದ್ದು ಏನಾದರೂ ಮಾತನಾಡುತ್ತಿದ್ದರೆ, ಮಾಡುತ್ತಿದ್ದರೆ, ನಾನು ಅದರ ಬಗ್ಗೆ ವ್ಯಥೆಪಡಬೇಕು. ಆದ್ದರಿಂದ ನಾನೊಬ್ಬ ವ್ಯಕ್ತಿಯಾಗಿ ಎಲ್ಲೋ ಒಂದು ಕಡೆಗೆ ನನ್ನ ಮನಸ್ಸಿಗೆ ಪಶ್ಚಾತ್ತಾಪ ಆದಾಗ, ನನ್ನ ನಡವಳಿಕೆಯಲ್ಲಿ ಎಲ್ಲೋ ಸ್ವಲ್ಪ ಎಡವಟ್ಟು ಆಗಿರಬಹುದು ಅಂತ ನನ್ನ ಮನಸ್ಸಿಗೆ ಅನ್ನಿಸಿದಾಗ, ನಾನು ಒಣ ಪ್ರತಿಷ್ಠೆಗೆ ಒಳಗಾಗಿ ನಾನು ಕ್ಷಮೆ ಕೇಳುವುದಿಲ್ಲ, ಅಧ್ಯಕ್ಷ ಸ್ಥಾನದಲ್ಲಿ ನಾನು ಇದ್ದೇನೆ, ನಾನು ಬಹಳ ಮೇಲಿರುವವನು ಎನ್ನತಕ್ಕದ್ದು ಏನೂ ಇಲ್ಲ. ಅಧ್ಯಕ್ಷ ಸ್ಥಾನ ಬೇರೆ, ವ್ಯಕ್ತಿಯಾಗಿ ನಾನು ನಡೆದುಕೊಳ್ಳತಕ್ಕಂಥದ್ದು ಬೇರೆ. ಆದ್ದರಿಂದ ಯಾರಿಗೂ ಕೂಡ ಇದರ ಬಗ್ಗೆ ಕನ್‌ಫ್ಯೂಷನ್ ಇರತಕ್ಕಂಥದ್ದು ಬೇಡ. ಒಬ್ಬ ವ್ಯಕ್ತಿಯಾಗಿ ನಾನು ನಿನ್ನೆ ಪ್ರತಿಕ್ರಿಯಿಸಿದ್ದು ಕೂಡ ಅಗತ್ಯವಾಗಿ ಹೆಚ್ಚು ಪ್ರತಿಕ್ರಿಯೆ ತೋರಿಸಿದೆ, ಏನೋ ಅಂತ ನನ್ನ ಮನಸ್ಸಿಗೆ ಕೂಡ ಅನಿಸಿತು. ನನ್ನ ಮನಸ್ಸಿಗೆ ಅನಿಸಿದಾಗ ಅದನ್ನು ನಾನು ಒಳಗೇ ಇಟ್ಟುಕೊಂಡು ಕುದಿಯಬೇಕೇ? ಅಥವಾ ಅದನ್ನು .ಹೊರಗೆ ಹಾಕಿಕೊಂಡು ನನ್ನ ಮನಸ್ಸನ್ನು ಹಗುರ ಮಾಡಿಕೊಳ್ಳಬೇಕೇ? ಯಾರು ಒಂದು ಭಾವನೆಯನ್ನು ತನ್ನ ಮನಸ್ಸಿನ ಒಳಗೇ ಇಟ್ಟುಕೊಂಡು, ಲೆಕ್ಕಾಚಾರ ಹಾಕಿಕೊಂಡು, ಅದಕ್ಕೆ ಕ್ಯಾಲ್ಕುಲೇಟ್ ಮಾಡಿ ಪ್ರತಿಕ್ರಿಯೆ ತೋರಿಸುತ್ತಾರೋ, ಅವರು ನನ್ನ ಪ್ರಕಾರ ನೇರವಾದ ಮನುಷ್ಯರಾಗುವುದಿಲ್ಲ. ಯಾರು ಸಹಜವಾದ ಪ್ರತಿಕ್ರಿಯೆ ತೋರಿಸುತ್ತಾರೆ ಅಥವಾ ತಮ್ಮಿಂದಾದ ಪ್ರತಿಕ್ರಿಯೆ ಬಗ್ಗೆ ತದನಂತರ ತಾವಾಗಿ ತಾವೇ ತಿದ್ದಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ ಅಥವಾ ಪಶ್ಚಾತ್ತಾಪ ಪಡುತ್ತಾರೆ, ಅವರಲ್ಲಿ ಮನುಷ್ಯತ್ವ ಇನ್ನೂ ಜೀವಂತ ಇದೆ ಎನ್ನತಕ್ಕಂಥದ್ದು ನನ್ನ ಭಾವನೆ. ಇದನ್ನು ನೀವೇನು ಅಡ್ಜಸ್ಟ್‌ಮೆಂಟ್ ಇತ್ಯಾದಿ ವಿಚಾರ ಹೇಳಿದ್ದೀರಿ, ಅದೆಲ್ಲಾ ನಾವು ಯೋಚನೆ ಮಾಡುವುದು ಬೇಡ. ತಮಗೆ ಆಗಲೀ, ಮಾನ್ಯ ಸದಾನಂದಗೌಡರಿಗೇ ಆಗಲೀ ಅಥವಾ ಮತ್ತೆ ಯಾವುದೇ ಸದಸ್ಯರಿಗೇ ಆಗಲೀ, ನಮ್ಮ ಸದನದ ಕಲಾಪ ನಡೆಸತಕ್ಕಂಥ ಸಂದರ್ಭದಲ್ಲಿ ಇಂತಹ ಒಂದು ಘಟನೆ ನಡೆದಾಗ, ಅದು ಬೇರೆ ರೀತಿಯಲ್ಲಿ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳ ಹಸರಿನ ಮುಂದೆ ಇರುವ 1971ನೇ ಸಾಲಿನ ಎ ಅಂಡ್ ಎಸ್ (ಕರ್ತವ್ಯಗಳು, ಅಧಿಕಾರ ಮತ್ತು ಪರಿತ್ಯಾಗಗಳು) ಅಧಿನಿಯಮದ ಕಲಮು 19(ಎ)(3)ರ ಮೇರಗೆ ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲಕರವರು ನೀಡಿರುವ 1996ನೇ ಸಾಲಿನ ಮಾರ್ಚ್ 31ರ ಅಂತ್ಯಕ್ಕೆ ಕೂಡಿಗೊಂಡಂತೆ ಕರ್ನಾಟಕ ಸರ್ಕಾರಕ್ಕೆ (ಮಾಲ್ಯ) ಸಂಬಂಧಿಸಿದ ಲಕ್ಷಪರಿಶೋಧನ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು. ಇನ್ನೊಂದು ವಿಚಾರವೇನೆಂದರೆ ಮಾರ್ಚ್‌ನಲ್ಲಿ ನಾವು ಸೇರುವ ವೇಳೆಗೆ ನಿಮ್ಮಲ್ಲಿಯಂಗ್ ಲಾ ಗ್ರಾಜುಯೇಟ್ಸ್ ಆಗಿರತಕ್ಕಂಥ ಸದಸ್ಯರು ಯಾರಿದ್ದಾರೆ please choose them as Parliamentary Secretaries. ಇದರಿಂದ ಕೆಲವರಿಗಾದರೂ ಟ್ರೈನ್ ಮಾಡಿದ ಹಾಗೆ ಆಗತ್ತದೆ. It is not going to cost more. ಪಾರ್ಲಿಮೆಂಟರಿ ಸೆಕ್ರೆಟರಿಯನ್ನು ಹೀಗೆ ಒಬ್ಬೊಬ್ಬ ಮಂತ್ರಿಗೆ ನೀವು ಅಟ್ಯಾಚ್ ಮಾಡಿದರೆ, ಕಾನೂನು ಪ್ರಾಕ್ಟೀಸ್ ಜೊತೆಗೆ, ಫೆಮಿಲಿಯರ್ ಆಗುತ್ತಾರೆ. You can examine.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಬಹಳ ಉತ್ತಮವಾದಂತಹ ಸಲಹೆಯನ್ನು ಕೊಟ್ಟಿದ್ದೀರಿ. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಹಿಂದೆ ಇದಂತಹ ಘಟನೆಗಳನ್ನು ತಮಗೆ ಹೇಳುತ್ತೇನೆ. ತಾವು ಬಹಳ ಸಮಯೋಚಿತ ವಿಚಾರವನ್ನು ಹೇಳಿದ್ದೀರಿ. ಪಾರ್ಲಿಮೆಂಟರಿ ಸೆಕ್ರೆಟರಿಗಳಿಗೆ ಒಂದು ಕಡತವನ್ನು ವಿಲೇವಾರಿ ಮಾಡಿದರೆ, ಇಷ್ಟು ದುಡ್ಡು ಎಂದು ಇರುತ್ತಿತ್ತು. ಹಿಂದೆ ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿ ಕೆಲವು ಪಾರ್ಲಿಮೆಂಟರಿ ಸೆಕ್ರೆಟರಿಯಾದಂತಹವರಿಗೆ ಫೈಲ್‌ಗಳು ಬರಲಿಲ್ಲ, 15 ರೂಪಾಯಿ ಬಂದಿತ್ತು ಎಂದು ಹೇಳಿ ವಿವಾದ ಆಗಿದ್ದು ತಮಗೆ ಗೊತ್ತಿದೆ. ಅವರು ಈ ವಿಚಾರಗಳನ್ನು ಕಲಿಯದೆ ತಾವು ಏನು ಸಮರ್ಪಕವಾಗಿದ ಬಗ್ಗೆ ಹೇಳುತ್ತಿದ್ದೀರಿ, ಅದು ಬೇರೆ ಅಧಿಕಾರದ ವಿಚಾರದಲ್ಲಿ ಚರ್ಚೆಯಾಗುವಂತಹ ಸಂಭವ ಕೂಡ ಇದೆ. ನಾವು ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಆಗಮಿಸಿದರು.)

ಅಧ್ಯಕ್ಷರು : ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿ ಯಾರು ಯಂಗ್ ಲಾ ಗ್ರಾಜುಯೇಟ್ಸ್, ಆಗಿರತಕ್ಕಂಥ ಮೆಂಬರ್ಸ್ ಬಂದಿದ್ದಾರೆ they may be appointed as Parliamentary Secretaries attached to various Ministers and Ministries ನಮಗೆ ಅಸೆಂಬ್ಲಿ ವರ್ಕ್ ಸುಲಭವಾಗುತ್ತದೆ. ಅವರಿಗೂ ಕೂಡ ಹೆಚ್ಚು ವಿಷಯಗಳು ಗೊತ್ತಾಗುತ್ತದೆ. They will become more familiar with Parliamentary Practice. They will be trained ಎಂದು ಹೇಳುತ್ತಿದ್ದ. ತಾವು ಅಷ್ಟರಲ್ಲಿ ಬಂದಿರಿ. I just made a suggestion. The Hon'ble Minister was telling about the past experience ....

ತೊಂದರೆ ಮಾಡುವುದಿಲ್ಲ. ಸದಾನಂದರು ಕಮ ಕೋರತಕ್ಕದ್ದು ಬಹಳ ಅಪರೂಪ ಏಂದು ತಾವು ಹೇಳಿದಿರಿ. ಹೌದು, ನಾನು ಸಭಾಧ್ಯಕ್ಷ ಆನಂತರ ಅನೇಕ ಬಿಜಾರಗಳಲ್ಲಿ ನಾನು ಸ್ವಲ್ಪ ಜಿರ್ಣಾಕ್ಷದ ವ್ಯಕ್ತಿ ಆಗಿದ್ದೇನೆ. ಬಹಿರಂಗ ಸಭೆಗಳಲ್ಲಿ ನಾನು ಮಾತನಾಡತಕ್ಕಂಥ ಬಿಜಾರ, ಸಂದರ್ಶನಗಳಲ್ಲಿ ನಾನು ಮಾಳತಕ್ಕಂಥದ್ದು ಇದಲ್ಲಾ ಜಿರ್ಣಾಕ್ಷದಾಗಿದೆ. ಸಭಾಧ್ಯಕ್ಷ ಆದವನು ನಿರ್ಜೀವ ವ್ಯಕ್ತಿಯಲ್ಲ. ಅವನೂ ಕೂಡ ಒಬ್ಬ ಸಕ್ರೀಯ ರಾಜಕಾರಣಿ. ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಮೇಲೆ ತನ್ನ ಜವಾಬ್ದಾರಿ ನಿರ್ವಹಣೆಗೆ ನಿಷ್ಪಕ್ಷ ಮನೋಭಾವವಿಂದ ಅವನು ಇರಬೇಕು. ನಾನು ಕರಾವಳಿ ಜಿಲ್ಲೆಗಳಲ್ಲಿ ಸಕ್ರೀಯವಾಗಿ ಹೋರಾಟ ಮಾಡಿ, ಸದನಕ್ಕೆ ಬಂದ ತಕ್ಷಣ ನಾನು ಅಧ್ಯಕ್ಷನಾಗಿದ್ದೇನೆ. ಆದರೂ ಕೂಡ ನಾನು ಬಹಳ ನಿಗ್ರಹದಿಂದ, ತಮಗೆ ಹೇಳಬೇಕಾಗಿದ್ದರೆ ಪಿ.ಎಲ್.ಡಿ. ಬ್ಯಾಂಕ್ ಚುನಾವಣೆ ನಡೆಯಿತು ಅಂದರೂ ಕೂಡ ನಾನು ಊರಿನ ಕಡೆಗೆ ಹೋಗುವುದಿಲ್ಲ. ಪಾರ್ಲಿಮೆಂಟ್ ಚುನಾವಣೆ ಅಥವಾ ಇನ್ನೊಂದು ಚುನಾವಣೆ ವಿಷಯ ಹಾಗಿರಲಿ, ಪಿ.ಎಲ್.ಡಿ. ಬ್ಯಾಂಕ್ ಚುನಾವಣೆ ಇದ್ದರೂ ನಾನು ಹೋಗುವುದಿಲ್ಲ. ಇಷ್ಟೊಂದು ಜವಾಬ್ದಾರಿಯಿಂದ ನಾನು ನಡೆದುಕೊಳ್ಳುತ್ತಿದ್ದೇನೆ. ಸ್ಪೀಕರ್ಸ್ ಆಕ್ಟಿವಿಸಂ ಅಂತ ಹೇಳಿ ಕೆಲವರು ವ್ಯಾಖ್ಯಾನ ಮಾಡಿರತಕ್ಕಂಥದ್ದನ್ನು ಕೂಡ ನಾನು ಕೇಳಿದ್ದೇನೆ. ಅಧ್ಯಕ್ಷರು ಬಹಳ ಮಾತನಾಡುತ್ತಾರೆ ಏಂದೂ ಸಹ ನನ್ನ ಬಗ್ಗೆ ಟೀಕೆ ಬಂದಿರುವನ್ನು ಕೇಳಿದ್ದೇನೆ. ಕೆಲವು ವಿಚಾರಗಳ ಮೇಲೆ ನಾನು ಮಾತನಾಡದೇ ಹೇಗೆ ಕುಳಿತಿರಲಿ? ನಾನು ಸ್ಪೀಕರ್‌ರವರ ಕರ್ತವ್ಯಗಳಿಗೆ, ಸಭಾಧ್ಯಕ್ಷರಾಗಿ ನಡೆಸಬೇಕಾದಂತಹ ಕರ್ತವ್ಯಗಳಿಗೆ ಚ್ಯುತಿ ಬರತಕ್ಕಂಥದ್ದು ಏನಾದರೂ ಮಾತನಾಡುತ್ತಿದ್ದರೆ, ಮಾಡುತ್ತಿದ್ದರೆ, ನಾನು ಅವರ ಬಗ್ಗೆ ವ್ಯಥೆಪಡಬೇಕು. ಆದ್ದರಿಂದ ನಾನೊಬ್ಬ ವ್ಯಕ್ತಿಯಾಗಿ ಎಲ್ಲೋ ಒಂದು ಕಡೆಗೆ ನನ್ನ ಮನಸ್ಸಿಗ ಪಶ್ಚಾತ್ತಾಪ ಆದಾಗ, ನನ್ನ ನಡವಳಿಕೆಯಲ್ಲಿ ಎಲ್ಲೋ ಸ್ವಲ್ಪ ಏಡವಟ್ಟು ಆಗಿರಬಹುದು ಅಂತ ನನ್ನ ಮನಸ್ಸಿಗ ಅನ್ನಿಸಿದಾಗ, ನಾನು ಒಂಣ ಪ್ರತಿಷ್ಠೆಗೆ ಒಳಗಾಗಿ ನಾನು ಕ್ಷಮೆ ಕೇಳುವುದಿಲ್ಲ, ಅಧ್ಯಕ್ಷ ಸ್ಥಾನದಲ್ಲಿ ನಾನು ಇದ್ದೇನೆ, ನಾನು ಬಹಳ ಮೇಲಿರುವವನು ಎನ್ನತಕ್ಕದ್ದು ಏನೂ ಇಲ್ಲ. ಅಧ್ಯಕ್ಷ ಸ್ಥಾನ ಬೇರೆ, ವ್ಯಕ್ತಿಯಾಗಿ ನಾನು ನಡೆದುಕೊಳ್ಳತಕ್ಕಂಥದ್ದು ಬೇರೆ. ಆದ್ದರಿಂದ ಯಾರಿಗೂ ಕೂಡ ಇದರ ಬಗ್ಗೆ ಕನ್‌ಫ್ಯೂಷನ್ ಇರತಕ್ಕಂಥದ್ದು ಬೇಡ. ಒಬ್ಬ ವ್ಯಕ್ತಿಯಾಗಿ ನಾನು ನಿನ್ನ ಪ್ರತಿಕ್ರಿಯೆಸಿದ್ದು ಕೂಡ ಅಗತ್ಯವಾಗಿ ಹೆಚ್ಚು ಪ್ರತಿಕ್ರಿಯೆ ತೋರಿಸಿದೆ, ಏನೋ ಅಂತ ನನ್ನ ಮನಸ್ಸಿಗೆ ಕೂಡ ಅನಿಸಿತು. ನನ್ನ ಮನಸ್ಸಿಗೆ ಅನಿಸಿದಾಗ ಅದನ್ನು ನಾನು ಒಳಗೇ ಇಟ್ಟುಕೊಂಡು ಕುದಿಯಬೇಕೇ? ಅಥವಾ ಅದನ್ನು ಹೊರಗೆ ಹಾಕಿಕೊಂಡು ನನ್ನ ಮನಸ್ಸನ್ನು ಹಗುರ ಮಾಡಿಕೊಳ್ಳಬೇಕೇ? ಯಾರು ಒಂದು ಭಾವನೆಯನ್ನು ತನ್ನ ಮನಸ್ಸಿನ ಒಳಗೇ ಇಟ್ಟುಕೊಂಡು, ವಿಕ್ಯಾಚಾರ ಹಾಕಿಕೊಂಡು, ಅದಕ್ಕೆ ಕ್ಯಾಲ್ಕುಲೇಟ್ ಮಾಡಿ ಪ್ರತಿಕ್ರಿಯೆ ತೋರಿಸುತ್ತಾರೋ, ಅವರು ನನ್ನ ಪ್ರಕಾರ ನೇರವಾದ ಮನುಷ್ಯರಾಗುವುದಿಲ್ಲ. ಯಾರು ಸಹಜವಾದ ಪ್ರತಿಕ್ರಿಯೆ ತೋರಿಸುತ್ತಾರೆ ಅಥವಾ ತಮ್ಮಿಂದಾದ ಪ್ರತಿಕ್ರಿಯೆ ಬಗ್ಗೆ ತದನಂತರ ತಾವಾಗಿ ತಾವೇ ತಿದ್ದಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ ಅಥವಾ ಪಶ್ಚಾತ್ತಾಪ ಪಡುತ್ತಾರೆ, ಅವರಲ್ಲಿ ಮನುಷ್ಯತ್ವ ಇನ್ನೂ ಜೀವಂತ ಇದೆ ಎನ್ನತಕ್ಕಂಥದ್ದು ನನ್ನ ಭಾವನೆ. ಇದನ್ನು ನೀವೇನು ಅಡ್ಜಸ್ಟ್‌ಮೆಂಟ್ ಇತ್ಯಾದಿ ವಿಚಾರ ಹೇಳಿದ್ದೀರಿ, ಅದೆಲ್ಲಾ ನಾವು ಯೋಚನೆ ಮಾಡುವುದು ಬೇಡ. ತಮಗೆ ಆಗಲೀ, ಮಾನ್ಯ ಸದಾನಂದಗೌಡರಿಗೆ ಆಗಲೀ ಅಥವಾ ಮತ್ತೆ ಯಾವುದೇ ಸದಸ್ಯರಿಗೇ ಆಗಲೀ, ನಮ್ಮ ಸದನದ ಕಲಾಪ ನಡೆಸತಕ್ಕಂಥ ಸಂದರ್ಭದಲ್ಲಿ ಇಂತಹ ಒಂದು ಘಟನೆ ನಡೆದಾಗ, ಅದು ಬೇರೆ ರೀತಿಯಲ್ಲಿ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳ ಹೆಸರಿನ ಮುಂದೆ ಇರುವ 1971ನೇ ಸಾಲಿನ ಸಿ ಆಂಡ್ ಎ.ಜೆ (ಕರ್ತವ್ಯಗಳು, ಅಧಿಕಾರ ಮತ್ತು ಷರತ್ತುಗಳು) ಅಧಿನಿಯಮದ ಕಲಮು 19(ಎ)(3)ರ ಮೇರೆಗೆ ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲಕರವರು ನೀಡಿರುವ 1996ನೇ ಸಾಲಿನ ಮಾರ್ಚ್ 31ರ ಅಂತ್ಯಕ್ಕೆ ಕೊನೆಗೊಂಡಂತೆ ಕರ್ನಾಟಕ ಸರ್ಕಾರಕ್ಕೆ (ವಾಣಿಜ್ಯ) ಸಂಬಂಧಿಸಿದ ಲೆಕ್ಕಪರಿಶೋಧನ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು. ಇನ್ನೊಂದು ವಿಚಾರವೇನೆಂದರೆ ಮಾರ್ಚ್‌ನಲ್ಲಿ ನಾವು ಸೇರುವ ವೇಳೆಗೆ ನಿಮ್ಮಲ್ಲಿ ಯೆಂಗ್ ಲಾ ಗ್ರಾಜುಯೇಟ್ಸ್ ಆಗಿರತಕ್ಕಂಥ ಸದಸ್ಯರು ಯಾರಿದ್ದಾರೆ please choose them as Parliamentary Secretaries. ಇದರಿಂದ ಕೆಲವರಿಗಾದರೂ ಟ್ರೈನ್ ಮಾಡಿದ ಹಾಗೆ ಆಗತ್ತದೆ. It is not going to cost more. ಪಾರ್ಲಿಮೆಂಟರಿ ಸೆಕ್ರೆಟರಿಯನ್ನು ಹೀಗೆ ಒಬ್ಬೊಬ್ಬ ಮಂತ್ರಿಗೆ ನೀವು ಅಟ್ಯಾಚ್ ಮಾಡಿದರೆ, ಕಾನೂನು ಪ್ರಾಕ್ಟೀಸ್ ಜೊತೆಗೆ, ಫೆಮಿಲಿಯರ್ ಆಗುತ್ತಾರೆ. You can examine.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಬಹಳ ಉತ್ತಮವಾದಂತಹ ಸಲಹೆಯನ್ನು ಕೊಟ್ಟಿದ್ದೀರಿ. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಹಿಂದೆ ಆದಂತಹ ಘಟನೆಗಳನ್ನು ತಮಗೆ ಹೇಳುತ್ತೇನೆ. ತಾವು ಬಹಳ ಸದುದ್ದೇಶದ ವಿಚಾರವನ್ನು ಹೇಳಿದ್ದೀರಿ. ಪಾರ್ಲಿಮೆಂಟರಿ ಸೆಕ್ರೆಟರಿಗಳಿಗೆ ಒಂದು ಕಡತವನ್ನು ವಿಲೇವಾರಿ ಮಾಡಿದರೆ, ಇಷ್ಟು ದುಡ್ಡು ಎಂದು ಇರುತ್ತಿತ್ತು. ಹಿಂದೆ ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿ ಕೆಲವು ಪಾರ್ಲಿಮೆಂಟರಿ ಸೆಕ್ರೆಟರಿಯಾದಂತಹವರಿಗೆ ಫೈಲ್‌ಗಳು ಬರಲಿಲ್ಲ, 15 ರೂಪಾಯಿ ಬಂದಿತ್ತು ಎಂದು ಹೇಳಿ ವಿವಾದ ಆಗಿದ್ದು ತಮಗೆ ಗೊತ್ತಿದೆ. ಅವರು ಈ ವಿಚಾರಗಳನ್ನು ಕಲಿಯದೆ ತಾವು ಏನು ಸದುಪಯೋಗದ ಬಗ್ಗೆ ಹೇಳುತ್ತಿದ್ದೀರಿ, ಅದು ಬೇರೆ ಅಧಿಕಾರದ ವಿಚಾರದಲ್ಲಿ ಚರ್ಚೆಯಾಗುವಂತಹ ಸಂಭವ ಕೂಡ ಇದೆ. ನಾವು ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಆಗಮಿಸಿದರು.)

ಅಧ್ಯಕ್ಷರು : ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿ ಯಾರು ಯೆಂಗ್ ಲಾ ಗ್ರಾಜುಯೇಟ್ಸ್ ಆಗಿರತಕ್ಕಂಥ ಮೆಂಬರ್ಸ್ ಬಂದಿದ್ದಾರೆ they may be appointed as Parliamentary Secretaries attached to various Ministers and Ministries ನಮಗೆ ಅಸೆಂಬ್ಲಿ ವರ್ಕ್ ಸುಲಭವಾಗುತ್ತದೆ. ಅವರಿಗೂ ಕೂಡ ಹೆಚ್ಚು ವಿಷಯಗಳು ಗೊತ್ತಾಗುತ್ತದೆ. They will become more familiar with Parliamentary Practice. They will be trained ಎಂದು ಹೇಳುತ್ತಿದ್ದೆ. ತಾವು ಅಷ್ಟರಲ್ಲಿ ಬಂದಿರಿ. I just made a suggestion. The Hon'ble Minister was telling about the past experience ....